# ಶಿಕ್ಷಣ ಮತ್ತು ಜಾಗತೀಕರಣ

ಎನ್.ಎಸ್. ಚಕ್ರವರ್ತಿ

## ಶಿಕ್ಷಣದ ಆಯಾಮಗಳು

ಶಿಕ್ಷಣ ಎನ್ನುವುದರ ಅರ್ಥವೇನು. ಮಹತ್ತ್ವವೇನು? ಇದಕ್ಕೆ ಉತ್ತರಕ್ಕಾಗಿ ನಾವು ಅದರ ಎಲ್ಲ ಆಯಾಮಗಳನ್ನೂ ಪರಿಶೀಲಿಸಬೇಕು.

**ಶಿಕ್ಷಣವೆಂದರೇನು?**

- ಜೀವನೋಪಾಯದ ಸಲುವಾಗಿ, ಒಂದು ಉದ್ಯೋಗವನ್ನೋ ವೃತ್ತಿಯನ್ನೋ ಹಿಡಿಯಲು ಬೇಕಾದ ಸಾಹಿತ್ಯರಚನೆ, ಕಲೆ, ಸಂಗೀತ – ಮತ್ತಿತರ ಪ್ರತಿಭೆಗಳನ್ನು ಬೆಳೆಸುವ ಅಚ್ಚುಕಟ್ಟಾದ ವಿಧಾನವೆ?
- ಒಂದು ಕ್ಲಿಷ್ಟ ಹಾಗೂ ಸಂಕೀರ್ಣ ಸಮಾಜದಲ್ಲಿ ಬದುಕಲು ಬೇಕಾದ ಉಪಾಯಗಳು ಅಥವಾ ಯುಕ್ತಿಗಳನ್ನು ಕಲಿಯುವುದೆ?
- ಜಗತ್ತಿನಲ್ಲಿರುವ ಜ್ಞಾನರಾಶಿಯ ಒಂದು ಇಲ್ಲವೆ ಹಲವು ಅಂಶಗಳ ಬಗ್ಗೆ ಆಳವಾದ ಅರಿವನ್ನು ಪಡೆಯುವುದೆ?
- "ನಾನು" ಯಾರು ಎನ್ನುವುದನ್ನು ಅರಿತುಕೊಳ್ಳುವುದೆ? ಹಾಗೆನ್ನುವುದಾದರೆ, 'ನಾನು' ಎನ್ನುವುದೇನು? ಅದರ ನಿಜವಾದ ಸ್ವರೂಪವೇನು?
- ವ್ಯಕ್ತಿ–ಸಮಾಜ–ರಾಷ್ಟ್ರೀಯತೆ–ವಿಶ್ವಾತ್ಮಕತೆ ಇವುಗಳ ನಡುವಿನ ಸಂಬಂಧಗಳನ್ನು ತಿಳಿದುಕೊಳ್ಳುವುದೆ?

### ಬದುಕಿನ ವಿಧಾನವಾಗಿ ಶಿಕ್ಷಣ

**ವಿದ್ಯಾಭ್ಯಾಸವೆಂದರೆ ಮಾನವನಲ್ಲಿ ಈಗಾಗಲೇ ಅಂತರ್ಗತವಾಗಿರುವ ಪರಿಪೂರ್ಣತೆಯ ವಿಕಾಸ.**

*–ಸ್ವಾಮಿ ವಿವೇಕಾನಂದ*

**ಶಿಕ್ಷಣ ಆರಂಭವಾಗುವುದು ತಾಯಿಯ ಮಡಲಿನಲ್ಲಿ; ಸಣ್ಣ ಮಕ್ಕಳು ತಮ್ಮ ಸುತ್ತಮುತ್ತ ಕೇಳಿಸಿಕೊಳ್ಳುವ ಪ್ರತಿಯೊಂದು ಪದವೂ ಅವುಗಳ ಚಾರಿತ್ರ್ಯನಿರ್ಮಾಣದಲ್ಲಿ ಪರಿಣಾಮ ಬೀರುತ್ತದೆ.** *– ಹೊಸಿಯ ಬಲ್*

**ಶಾಲಾಕಾಲೇಜುಗಳಲ್ಲಿ ಬೋಧಿಸುವುದು ಶಿಕ್ಷಣವಾಗದು; ಅದು ಶಿಕ್ಷಣ ಪಡೆಯುವ ವಿಧಾನಗಳಷ್ಟೆ.** *– ಎಮರ್‌ಸನ್*

**ಶಿಕ್ಷಣ ಬೇಕಾಗಿರುವುದು ಕೈಗೆ, ತಲೆಗೆ ಮತ್ತು ಹೃದಯಕ್ಕೆ.**

*– ಮಹಾತ್ಮ ಗಾಂಧಿ*

**ಶಿಕ್ಷಣವೆಂದರೆ ನಿಮ್ಮ ಮನಶ್ಶಾಂತಿಯನ್ನು ಮತ್ತು ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ, ಯಾರೂ ಏನು ಹೇಳಿದರೂ ಎಲ್ಲವನ್ನೂ ಕೇಳಿಸಿಕೊಳ್ಳುವ ಶಕ್ತಿ.** *–ರಾಬರ್ಟ್ ಫ್ರಾಸ್ಟ್*

## ಯುನೆಸ್ಕೋ ನಿರ್ಧಾರಗಳು

ಇವನ್ನೆಲ್ಲ ಸಮಗ್ರವಾಗಿ ಪರಿಶೀಲಿಸಿ ವರದಿ ಸಲ್ಲಿಸಲು **ಯುನೆಸ್ಕೋ–** UNESCO (United Nations Educational, Scientific, and Cultural Organization, ವಿಶ್ವಸಂಸ್ಥೆಯ ಅಂಗವಾದ **ಶೈಕ್ಷಣಿಕ,** ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ) '೨೧ನೇ ಶತಮಾನಕ್ಕಾಗಿ ಶಿಕ್ಷಣದ ಅಂತರರಾಷ್ಟ್ರೀಯ ಆಯೋಗ' ವನ್ನು ರಚಿಸಿತ್ತು. ಮಾನವಜೀವನದ ಆವಶ್ಯಕತೆಗಳು ಹಲವಾರು ಬಗೆಯವಷ್ಟು? ಅವು ಯಾವುವು, ಅವುಗಳ ಪೂರೈಕೆಗೆ ಬೇಕಾದ ಎಂತೆಂತಹ ಶಿಕ್ಷಣೋಪಾಯಗಳು ಬೇಕಾಗಿದೆ ಎಂಬುದರ ಬಗ್ಗೆ ಈ ಆಯೋಗವು ಅಧ್ಯಯನ ನಡೆಸಿತು. ಮನುಷ್ಯನ ಸಾಮಾನ್ಯವರ್ಜೆಯ ಬದುಕಿಗೆ; ಆತನ ಸ್ವಸಾಮರ್ಥ್ಯದ ಪರಿಪೂರ್ಣ ವರ್ಧನೆಗೆ; ಅಕ್ಷರಜ್ಞಾನ ಮತ್ತು ತಕ್ಕಮಟ್ಟಿನ ಜೀವನಕ್ಕೆ ಮತ್ತು ದುಡಿಮೆಗೆ; ಜ್ಞಾನಕ್ಕೆ, ಚಾತುರ್ಯಗಳಿಗೆ; ಮೌಲ್ಯಗಳಿಗೆ ಮತ್ತು ಮುಖ್ಯವಾಗಿ ಅವನಲ್ಲಿ ಸೂಕ್ತ ಧೋರಣೆಗಳ(Attitude) ಬೆಳವಣಿಗೆಗೆ–ಇವೆಲ್ಲಕ್ಕೂ ಅವಶ್ಯವಾದಂತಹ ಓದು–ಬರಹ, ಮಾತುಕತೆಯಾಡುವ ಸಾಮರ್ಥ್ಯ, ಗಣಿತಜ್ಞಾನ, ಸಮಸ್ಯಾ ಪರಿಹಾರಶಕ್ತಿ – ಇವನ್ನೆಲ್ಲ ಕಲಿಸುವ ನಾನಾ ಮಾರ್ಗಗಳು ಮತ್ತು ಉಪಾಯಗಳನ್ನು ಪರಿಶೀಲಿಸಿದ ಆಯೋಗ ಈ ಕೆಳಗಿನ ನಿರ್ಧಾರಗಳಿಗೆ ಬಂದಿತು:

- ಪ್ರತಿಯೊಬ್ಬ ವ್ಯಕ್ತಿಯೂ–ಇದಕ್ಕೆ ಅಧ್ಯಾಪಕರೂ ಹೊರತಲ್ಲ–**'ಕಲಿಯುವುದು ಹೇಗೆ'** ಎನ್ನುವುದನ್ನು ಮೊದಲು ಕಲಿಯಬೇಕು.
- ಸಾಂಪ್ರದಾಯಿಕ ಮತ್ತು ಪುಸ್ತಕಗಳ ಮೂಲಕ ನಡೆಸುವ ಬೋಧನೆಗೆ ತೀವ್ರವಾದ ಒತ್ತು ಕೊಡಬೇಕು. **ಇದರಲ್ಲಿ ವಿದ್ಯಾರ್ಥಿಗಳ ಸಕ್ರಿಯ ಪಾತ್ರ ಅತಿ ಮುಖ್ಯ.**
- ಶಿಕ್ಷಣ ಎನ್ನುವುದು **ಜೀವಮಾನವಿಡೀ ಗಳಿಸಬಹುದಾದದ್ದು, ಗಳಿಸಬೇಕಾದದ್ದು'** ಎನ್ನುವುದೊಂದು ಶ್ರೇಷ್ಠ ಕಲ್ಪನೆ. ಕಲಿಕೆಯಲ್ಲಿ ಮಾರ್ಪಾಡುಗಳಿಗೆ ಅವಕಾಶ, ವಸ್ತುವೈವಿಧ್ಯ, ವಿವಿಧ ಸ್ಥಳ–ಸಮಯಗಳಲ್ಲಿ ಲಭ್ಯತೆ –ಈ ಅನುಕೂಲತೆಗಳೆಲ್ಲ ಶಿಕ್ಷಣ ವ್ಯವಸ್ಥೆಯಲ್ಲಿ ಅಡಕವಾಗಿರಬೇಕು.
- ಬೋಧಕ–ವಿದ್ಯಾರ್ಥಿ ಸಂಬಂಧವನ್ನು ಒಳಗೊಂಡ ಸಾಂಪ್ರದಾಯಿಕ ಶಿಕ್ಷಣಪದ್ಧತಿಯೇ ಅತ್ಯುತ್ತಮ; ಬೇರೆ ಯಾವ ವ್ಯವಸ್ಥೆಯೂ ಇದಕ್ಕೆ ಬದಲಿಯಾಗಲಾರದು.
- ತಮ್ಮ ಮಕ್ಕಳ ಶಾಲಾ ಶಿಕ್ಷಣದ ವಿಚಾರದಲ್ಲಿ ತಾಯಿತಂದೆಯರ ಅಭಿಪ್ರಾಯಕ್ಕೂ ಸ್ಥಾನ ಕೊಡಬೇಕು.

## ಶಿಕ್ಷಣದ ಅಂತಿಮ ಧ್ಯೇಯವೇನು?

ಆದರೆ, ಈ ಎಲ್ಲ ನಿರ್ಧಾರಗಳ ಕೊನೆಯಲ್ಲಿ ಉತ್ತರಿಸಲಾಗದೆ ಉಳಿದ ಮುಖ್ಯ ಪ್ರಶ್ನೆಯೆಂದರೆ–**'ಶಿಕ್ಷಣದ ಅಂತಿಮ ಧ್ಯೇಯವೇನು?'** ಎನ್ನುವುದು. ಇಂದಿನ ಆಧುನಿಕ ಸಂದರ್ಭಗಳ ಹಿನ್ನೆಲೆಯಲ್ಲಿ ಈ ಪ್ರಶ್ನೆಗೆ ಹೆಚ್ಚಿನ ಮಹತ್ತ್ವ ಉಂಟಾಗಿದೆ. ಕಾರಣವಿಷ್ಟೆ: ಜಾಗತಿಕ ಶಕ್ತಿಗಳ ಪ್ರಭಾವದಲ್ಲಿ, ಈವರೆಗೆ

> ಯಾವ ಶಿಕ್ಷಣದಿಂದ ನಮ್ಮ ಇಚ್ಛಾಶಕ್ತಿಯು ಅನೇಕ ಪೀಳಿಗೆಗಳಿಂದ ಬಲಾತ್ಕಾರವಾಗಿ ಹತ್ತಿಕ್ಕಲ್ಪಟ್ಟು ಈಗ ಮೃತಪ್ರಾಯವಾಗಿರುವುದೋ ಅದು ಶಿಕ್ಷಣವೆ? ನೀವೇ ಆಲೋಚಿಸಿರಿ. ಯಾವುದರ ದುಷ್ಪ್ರಭಾವದಿಂದ ಹೊಸ ಚೈತನ್ಯದಾಯಕ ವಿಚಾರಗಳ ಮಾತು ಹಾಗಿರಲಿ, ಇರುವ ಹಳೆಯ ವಿಚಾರಗಳು ಕೂಡಾ ಒಂದೊಂದಾಗಿ ಅಳಿದು ಹೋಗುತ್ತಿವೆಯೋ, ಯಾವುದು ಮನುಷ್ಯನನ್ನು ಯಂತ್ರಸದೃಶನನ್ನಾಗಿ ಮಾಡಿರುವುದೋ ಅದೆಂತಹ ಶಿಕ್ಷಣ? ನನ್ನ ಅಭಿಪ್ರಾಯದಲ್ಲಿ ಚಾಲಿತ ಯಂತ್ರದಂತೆ ಒಳ್ಳೆಯವರಾಗಿರುವುದಕ್ಕಿಂತಲೂ ಸ್ವಂತ ಇಚ್ಛಾಶಕ್ತಿ ಮತ್ತು ಬುದ್ಧಿಶಕ್ತಿಗಳ ಪ್ರೇರಣೆಯಿಂದ ದಾರಿತಪ್ಪಿದರೂ ಅದು ಹೆಚ್ಚು ಶ್ರೇಯಸ್ಕರ.
>
> – ಸ್ವಾಮಿ ವಿವೇಕಾನಂದ(ಕೃತಿಶ್ರೇಣಿ.೫.೧೨೩)

ಇದ್ದಂತಹ ಮಾನವನ ಪ್ರಗತಿಯ ಕಲ್ಪನೆಗಳೆಲ್ಲ ಅಳಿದು ಹೋಗಿವೆ. ಆ ಪ್ರಭಾವಗಳು ಇಡೀ ಜಗತ್ತನ್ನು ಒಂದು ಕೊಳ್ಳುಬಾಕ ಸಮಾಜವಾಗಿ (Consumerist Society) ಪರಿವರ್ತಿಸುತ್ತಿವೆ. ಆದ್ದರಿಂದ ನಾವೀಗ 'ಪ್ರಗತಿ'ಯ ಅರ್ಥವನ್ನು ಪುನರ್ವಿಮರ್ಶಿಸಬೇಕಾದ ಪ್ರಮೇಯ ಒದಗಿ ಬಂದಿದೆ. ಅದಕ್ಕಾಗಿ ವಿವಿಧ ಸಂಸ್ಕೃತಿಗಳಲ್ಲಿ ಪ್ರಗತಿಯನ್ನು ಸಾಧಿಸುವ ಸಾಂಪ್ರದಾಯಿಕ ವಿಧಾನಗಳು ಯಾವುವು ಎಂಬುದನ್ನು ನೋಡೋಣ.

## ಪ್ರಗತಿಯ ಅರ್ಥ

'ಅಂತರರಾಷ್ಟ್ರೀಯ ಶಿಕ್ಷಣ ಆಯೋಗ'ದ (೧೯೭೧) ವರದಿಯು ಹೀಗೆನ್ನುತ್ತದೆ: "ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಪ್ರಗತಿ ಎನ್ನುವುದು ಭ್ರಮನಿರಸನವನ್ನೇ ಮೂಡಿಸಿದೆ. ಹಿಂದಿನಂತೆ, ಆರ್ಥಿಕ ಅಭಿವೃದ್ಧಿಯೇ ಇಂದಿನ ಪ್ರಗತಿಯ ಸಾರಸರ್ವಸ್ವವೆಂದು, ಆದರ್ಶವೆಂದು ಭಾವಿಸುವಂತಿಲ್ಲ. **ಸಮಾನತೆ, ಸಹಮಾನವರ ಸ್ಥಿತಿಗತಿಯ ಬಗ್ಗೆ ಕಾಳಜಿ, ಮತ್ತು ಮುಂದಿನ ತಲೆಮಾರುಗಳಿಗೆ ಬಿಟ್ಟುಕೊಡಬೇಕಾಗಿರುವ ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ಕಾಳಜಿ–** ಇವೆಲ್ಲವೂ ಕೇವಲ ಸಂಪದಭಿವೃದ್ಧಿಗಿಂತಲೂ ಮಿಗಿಲಾದ ಗುರಿಗಳು." ನಂತರ, ಇದರ ಆಧಾರದ ಮೇಲೆ, ಆಯೋಗವು ಈ ಮುಂದಿನ ತೀರ್ಮಾನಕ್ಕೆ ಬಂದಿತು:

*"ಪ್ರಗತಿ ಎಂಬುದರ ಉದ್ದೇಶವೆಂದರೆ, ಮಾನವನ ಸಂಪೂರ್ಣ ಸಾರ್ಥಕ್ಯಸಾಧನೆ. ಪ್ರಗತಿ ಎಂದರೆ, ವ್ಯಕ್ತಿಯಾಗಿ, ಕುಟುಂಬದ ಸದಸ್ಯನಾಗಿ, ಪ್ರಜೆಯಾಗಿ, ಒಬ್ಬನ ಒಟ್ಟು ಸಫಲತೆ, ಅಭಿವ್ಯಕ್ತಿಯ ವಿವಿಧ ಬಗೆಗಳು ಮತ್ತು (ವಿವಿಧ ಪಾತ್ರಗಳಲ್ಲಿ) ಅವನ ಕರ್ತವ್ಯಪ್ರಜ್ಞೆ – ಹೀಗೆ (ಅವನ ವ್ಯಕ್ತಿತ್ವದ ಅಂಗವಾಗಿ) ಏನೇನು ಇವೆಯೋ ಅವೆಲ್ಲವೂ ಬೆಳೆಯುತ್ತ, ಒಂದು ಸೃಜನಶೀಲ ವ್ಯಕ್ತಿತ್ವವಾಗಿ ಮೂಡುವ ಪ್ರಕ್ರಿಯೆ."*

*(" The aim of development is the complete fulfillment of man – in all richness of personality, the complexity of his forms of expression and his various commitments – as individual, member of family, citizen — all moulded into a creative personality ")*

ವೈವಿಧ್ಯಮಯ ಸಂಸ್ಕೃತಿಗಳು, ನಂಬಿಕೆಗಳು, ಶೈಕ್ಷಣಿಕ ಹಿನ್ನೆಲೆಗಳು ಮತ್ತು ಸಾಮಾಜಿಕ ಸಮಸ್ಯೆಗಳನ್ನು ಸಮನ್ವಯಗೊಳಿಸಲು ಯತ್ನಿಸುತ್ತಿರುವ ಒಂದು ಜಾಗತಿಕಸಂಸ್ಥೆಯು ಇಂತಹ ಘೋಷಣೆಯೊಂದನ್ನು ಹೊರಡಿಸಿರುವುದು ಅತ್ಯಂತ ಮಹತ್ತ್ವಪೂರ್ಣವಾಗಿದೆ ಎನ್ನುವುದನ್ನು ನಾವು ಗಮನಿಸಬೇಕು.

## ಶೈಕ್ಷಣಿಕ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುವ ಅಂಶಗಳು

ಶೈಕ್ಷಣಿಕ ಪ್ರಕ್ರಿಯೆಗಳು ಈ ಕೆಳಗಿನ ನಾಲ್ಕು ರೀತಿಗಳಲ್ಲಿ ಪ್ರಭಾವಕ್ಕೊಳಗಾಗುತ್ತವೆ:

- **ಜಾಗತಿಕ ಹಾಗೂ ರಾಷ್ಟ್ರಮಟ್ಟದಲ್ಲಿ ಚಾರಿತ್ರಿಕ, ಸಮಕಾಲೀನ, ಸೈದ್ಧಾಂತಿಕ ಹಾಗೂ ಆಡಳಿತ ಸಂವಿಧಾನದ ಅಂಶಗಳಿಂದ;**
- **ಪ್ರಾದೇಶಿಕ ಮಟ್ಟದಲ್ಲಿ ಅಲ್ಲಲ್ಲಿನ ಕಾರ್ಯವಿಧಿ–ವಿಧಾನಗಳಿಂದ;**
- **ಅಲ್ಲಲ್ಲಿನ ಸಾಂಸ್ಕೃತಿಕ ಮತ್ತು ಭಾಷಾ ಆದ್ಯತೆಗಳಿಂದ; ಮತ್ತು**
- **ಕೊನೆಯದಾಗಿ, ವ್ಯಕ್ತಿಗಳಿಗೆ ಇಲ್ಲವೆ ಸಂಸ್ಥೆಗಳಿಗೆ ನಿರ್ದಿಷ್ಟವಾದ ಕೆಲವು ಅಂಶಗಳಿಂದ.**

ಹೀಗೆ ಹಲವಾರು ಹಂತಗಳಲ್ಲಿ ಅನೇಕ ಅಂಶಗಳು ಶೈಕ್ಷಣಿಕ ಪ್ರಕ್ರಿಯೆಗಳ ಮೇಲೆ ಪ್ರಭಾವ ಬೀರುವುದರಿಂದ, ಒಟ್ಟು ಶಿಕ್ಷಣವ್ಯವಸ್ಥೆಯಲ್ಲಿ ಆಂತರಿಕ ಘರ್ಷಣೆಗಳಿರುವುದು ಸಹಜವೇ ಆಗಿದೆ ಎನ್ನುವುದನ್ನು ನಾವು ಒಪ್ಪಿಕೊಳ್ಳಲೇಬೇಕು.

## ಶಿಕ್ಷಣ ವ್ಯವಸ್ಥೆಯಲ್ಲಿ ಜಾಗತೀಕರಣದಿಂದಾಗುವ ಘರ್ಷಣೆಗಳು

**ಲಾಭದೃಷ್ಟಿಯ ಚಿಂತನೆ :** ಜಾಗತೀಕರಣವು ಪರಂಪರಾಗತ ಮೌಲ್ಯಗಳ ವಿರುದ್ಧವಾಗಿ ವರ್ತಿಸುತ್ತದೆ. ಭಾರತದಲ್ಲಿ ೨೦ನೇ ಶತಮಾನದ ಕೊನೆಯ ಕಾಲುಭಾಗದವರೆಗೂ ಶಿಕ್ಷಣವು ಒಂದು ನಿರ್ದಿಷ್ಟ ರೀತಿಯನ್ನು ಅನುಸರಿಸಿಕೊಂಡು ಬಂದಿತ್ತು. ಅದು ಬ್ರಿಟಿಷರು ಭಾರತದಲ್ಲಿ ಪರಿಚಯಿಸಿದ ಇಂಗ್ಲಿಷ್ ವಿದ್ಯಾಭ್ಯಾಸದ ಅನೇಕ ಪ್ರಭಾವಗಳನ್ನು ಮೈಗೂಡಿಸಿಕೊಂಡಿತ್ತಾದರೂ, ಹಿಂದಿನ ಸಾಂಸ್ಕೃತಿಕ ಬೇರುಗಳನ್ನೂ ಸಹ ಉಳಿಸಿಕೊಂಡಿತ್ತು. ಆದರೆ ೨೦ನೇ ಶತಮಾನದಲ್ಲಿ ವಿಶ್ವದೆಲ್ಲೆಡೆ ತೀವ್ರರೂಪದ ಅನೇಕ ಘರ್ಷಣೆಗಳು ಕಾಣಿಸಿಕೊಂಡವು. ತಂತ್ರಜ್ಞಾನ, ಆರ್ಥಿಕರಂಗಗಳ ಬೆಳವಣಿಗೆಗಳಿಂದ ಹೊಸ ವಿಚಾರಲಹರಿಗಳು ಹುಟ್ಟಿ ಜಗತ್ತಿನ ಎಲ್ಲ ಕಡೆ ಪ್ರಭಾವ ಬೀರತೊಡಗಿದವು. ಇದರಿಂದಾಗಿ ಶಿಕ್ಷಣಕ್ಷೇತ್ರದಲ್ಲಿಯೂ **ಬೋಧನೆಯ ವಸ್ತುವಿಷಯ, ಬೋಧನೆಯ ಕ್ರಮ, ಮತ್ತು ಬೋಧನೆಯ ವಿಧಾನ** (content, methodology and delivery of educational courses) ಇವುಗಳಿಗೆಲ್ಲ ಇದ್ದ ಅಂಗೀಕೃತ ರೀತಿನೀತಿಗಳಿಗೆ ಈಗ ಹೊಸ ಸವಾಲು ಎದುರಾಯಿತು. ಕ್ರಮೇಣ, ಶೈಕ್ಷಣಿಕ

ಸಿದ್ಧಾಂತಗಳೆಲ್ಲ ಲಾಭವೃಷ್ಟಿಯ ಚಿಂತನೆಗಳಿಂದಲೇ ರೂಪಗೊಳ್ಳು ತ್ತಿವೆ ಎನ್ನುವ ದೂರು ಕೇಳಿಬರತೊಡಗಿತು. ಹೊಸ ತಂತ್ರ ಜ್ಞಾನಗಳು ಬಂದಂತೆ ಮತ್ತು ವೇಗದ ಸಂಪರ್ಕಸಾಧನಗಳಿಂದ ವಿಶ್ವದ ಗಾತ್ರ ಕುಗ್ಗತೊಡಗಿದಂತೆ, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗಳ ಲಾಭ ಎಲ್ಲಕಡೆ ಸಮಪ್ರಮಾಣದಲ್ಲಿ ಹಂಚಿಕೆಯಾಗು ತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತ ಬಂದಿತು. (*ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಈ ಪ್ರಗತಿ ವೇಗವಾಗಿದ್ದರೆ, ಇತರ ದೇಶಗಳಲ್ಲಿ ಅದು ನಿಧಾನವಾಗಿರುತ್ತಿತ್ತು–ಸಂ.*).

**ಸಹಬಾಳ್ವೆಯ ಕಾಳಜಿ:** ಪ್ರಾದೇಶಿಕ ಪರಿಸ್ಥಿತಿಗಳಲ್ಲಿ ಇರುವ ಬಹು ಮುಖ ಭಿನ್ನತೆಗಳ ಕಾರಣದಿಂದ ಹೊಸ ಬಗೆಯ ಘರ್ಷಣೆಗಳು ತಲೆಯೆತ್ತಿದವು. **ಸಹಬಾಳ್ವೆಯ** ಕಾಳಜಿಯನ್ನು ಪಠ್ಯವಿಷಯದಲ್ಲಿ ಸೇರ್ಪಡಿಸುವುದು ಮತ್ತು ಈ ಜಗತ್ತಿನ ಹೊಸ ಸಮಸ್ಯೆಗಳನ್ನು ಎದುರಿಸುವಂತೆ ಆ ವಿಚಾರಗಳನ್ನು ಶಿಕ್ಷಣದಲ್ಲಿ ಅಂತರ್ಗತ ಗೊಳಿಸುವುದು ಹೇಗೆ ಎನ್ನುವುದು ತಜ್ಞರಿಗೆ ದೊಡ್ಡ ಸವಾ ಲಾಯಿತು. (UNESCO ಪ್ರಕಾರ,'ಸಹಬಾಳ್ವೆಯ ಕಲಿಕೆ'(living together) ಎನ್ನುವುದು, ಶಿಕ್ಷಣದ ನಾಲ್ಕು ಆಧಾರಸ್ತಂಭಗಳಲ್ಲಿ ಒಂದು. ಉಳಿದ ಮೂರೆಂದರೆ, 'ತಿಳಿವಿನ ಕಲಿಕೆ', 'ಮಾಡುವುದರ ಕಲಿಕೆ', ಮತ್ತು 'ಇರುವಿಕೆಯ ಕಲಿಕೆ' –*Learn to Know, Learn to do, Learn to be*) ಹೀಗಾಗಿ ವಿದ್ಯಾರ್ಥಿಗಳ ನಡುವೆ ಶಾಂತಿಯುತ ಸಹಬಾಳ್ವೆ–ಸಹಕಾರಗಳನ್ನು ಪ್ರೇರೇಪಿಸುವಂತಹ ಪಠ್ಯಕ್ರಮಗಳನ್ನು ರೂಪಿಸಲು ಹೊಸ ಒತ್ತಡ ಮೂಡಿತು.

### ಜಾಗತೀಕರಣದ ಸಮಸ್ಯೆಗಳು

ಮೇಲ್ಕಂಡ ಜಾಗತಿಕ ಘರ್ಷಣೆಗಳ ಫಲವಾಗಿ, ಶಾಲಾ ತರಗತಿಗಳಲ್ಲಿ ವಾಸ್ತವಿಕ, ಅರ್ಥಪೂರ್ಣ ಬದಲಾವಣೆಗಳನ್ನು ತರಬಲ್ಲ ಪಠ್ಯಕ್ರಮಗಳನ್ನು ನಾವು ಸಮಗ್ರವಾಗಿ ರೂಪಿಸ ಬೇಕಾಗಿದೆ ಎನ್ನುವುದು ಅನುಭವಕ್ಕೆ ಬಂದಿತು. ಆ ನಿಟ್ಟಿನಲ್ಲಿ ಕೆಳಕಂಡ ಸಮಸ್ಯೆಗಳು ಉದ್ಭವವಾದುವು:

#### ೧. ಪರಂಪರೆ ಹಾಗೂ ಆಧುನಿಕತೆಗಳ ನಡುವಿನ ಘರ್ಷಣೆ – ಮಾಹಿತಿ ತಂತ್ರಜ್ಞಾನ ಮತ್ತು ಕೈಗಾರಿಕಾ ಅಭಿವೃದ್ಧಿಯಿಂದ ಉಂಟಾದ ಸಮಸ್ಯೆ

ಅಭಿವೃದ್ಧಿ ಆಯೋಜಕರು ಜಗತ್ತಿನ ವಿಭಿನ್ನ ಸಂಸ್ಕೃತಿಗಳಲ್ಲಿನ ಸಹಜವಾದ ಸ್ವಂತಿಕೆಯನ್ನು ನಿರ್ಲಕ್ಷಿಸಿದ್ದರಿಂದಲೇ ಸಾಂಸ್ಕೃತಿಕ ಸ್ವಂತಿಕೆ ಎನ್ನುವುದೊಂದು ಸಮಸ್ಯೆಯಾಗಿ ಬೆಳೆದಿದೆ. ಔದ್ಯಮಿಕವಾಗಿ ಮುಂದುವರಿದ ದೇಶಗಳ ಅನುಭವವನ್ನು ಗಮನಿಸಿದರೆ, ಅಲ್ಲಿ ಅನುಸರಿಸಿದ ಅಭಿವೃದ್ಧಿ ಯೋಜನೆಗಳಿಂದ ಶಾಂತಿಯೂ ಹುಟ್ಟಿಲ್ಲ, ಸಾಮರಸ್ಯವೂ ಉಂಟಾಗಿಲ್ಲ; ಅಥವಾ ದಾರಿದ್ರ್ಯ ನಿರ್ಮೂಲನವಾಗಲೀ ಸಾಮಾಜಿಕ–ಆರ್ಥಿಕ ಸಮಾನತೆಯಾಗಲೀ ಉಂಟಾಗಿರುವಂತೆ ತೋರುವುದಿಲ್ಲ. ಇದ ರಿಂದಾಗಿ, ಆ ದೇಶಗಳಲ್ಲಿ ಚಾಲ್ತಿಯಲ್ಲಿರುವ ಅಭಿವೃದ್ಧಿ ಸಿದ್ಧಾಂತ ಗಳನ್ನು ಗಂಭೀರವಾಗಿ ಮರುಪರಿಶೀಲಿಸಬೇಕಾಗಿದೆ ಎಂಬ ಅರಿವು ಬೆಳೆಯಿತು. **ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸ್ಥಳೀಯ ಸಂಸ್ಕೃತಿಯನ್ನು ಅಳವಡಿಸಬೇಕಾದುದು ಈಗ ಮುಖ್ಯವಾಗಿದೆ; ಹಾಗೆಯೇ, ಅಭಿವೃದ್ಧಿ ಎನ್ನುವುದು ಜೀವನದ ಮೂಲಭೂತ ನೈತಿಕ ಮೌಲ್ಯಗಳಿಗೆ ಹೊಂದಿಕೊಂಡಿರಬೇಕು.** ಈ ಎಲ್ಲ ಮಾತುಗಳೂ ಏಷಿಯ ಖಂಡದ ದೇಶಗಳ ವಿಷಯದಲ್ಲಿ ವಿಶೇಷವಾಗಿ ಪ್ರಸ್ತುತವಾಗುತ್ತವೆ. ಆದ್ದರಿಂದ ಅಲ್ಲಿ ಶೈಕ್ಷಣಿಕ ಪಠ್ಯವಸ್ತುವನ್ನು (curriculum) ರೂಪಿಸುವಾಗ ಈ ವಿಚಾರಗಳನ್ನೆಲ್ಲ ಗಣನೆಗೆ ತೆಗೆದುಕೊಳ್ಳಬೇಕಾಗಿದೆ.

#### ೨. ಅಲ್ಪಾವಧಿಯ ಹಾಗೂ ದೀರ್ಘಾವಧಿಯ ಆವಶ್ಯಕತೆಗಳ ನಡುವಣ ಘರ್ಷಣೆ

ಜಗತ್ತಿನಲ್ಲಿ ಇಂದು ತಾತ್ಕಾಲಿಕ ಮಹತ್ತ್ವದ ಸುದ್ದಿಗಳಿಗೂ ಭಾವಾವೇಶಗಳಿಗೂ ವಿಪರೀತ ಪ್ರಾಧಾನ್ಯ ಸಿಗುತ್ತಿದೆ. ಅದ ರಿಂದಾಗಿ ಜನರ ಗಮನವೆಲ್ಲ ಅಂದಂದಿನ ತೊಂದರೆಗಳ ಮೇಲೆಯೇ ಕೇಂದ್ರೀಕೃತವಾಗಿದೆ. ಅಲ್ಲದೆ ಅವರಿಗೆ ಎಲ್ಲಕ್ಕೂ ಸಿದ್ಧ (Readymade) ಉತ್ತರಗಳು ಬೇಕು. ವಾಸ್ತವಿಕವಾಗಿ ಇದು ಅಸಾಧ್ಯ. ಅನೇಕ ಸಮಸ್ಯೆಗಳ ಪರಿಹಾರಕ್ಕೆ ಸಹನೆ, ಸಮಾಧಾನಗಳಿಂದ ನಡೆಸಿದ ಸಂಧಾನಪೂರ್ವಕವಾದ ಎಡೆ ಬಿಡದ ಪ್ರಯತ್ನವೊಂದೇ ಉಪಾಯ. ಶಿಕ್ಷಣದ ಸಿದ್ಧಾಂತಗಳನ್ನು ರೂಪಿಸುವಾಗ ಅನುಸರಿಸಬೇಕಾದದ್ದು ಇದೇ ಧೋರಣೆ, ಇದೇ ಮಾರ್ಗ.

#### ೩. ಅತಿಶಯವಾಗಿ ಹಿಗ್ಗುತ್ತಿರುವ ಜ್ಞಾನರಾಶಿಗೂ ಅದನ್ನು ಅರಗಿಸಿ ಕೊಳ್ಳಲು ಮನುಷ್ಯರಿಗಿರುವ ಮಿತಿಗೂ ನಡುವೆ ಇರುವ ಘರ್ಷಣೆ

ಇಂದಿನ ಸಮಾಜಗಳೆಲ್ಲ ಬಹುಮಟ್ಟಿಗೆ 'ಮಾಹಿತಿ ಸಮಾಜ' ಗಳಾಗಿ (Information Society) ರೂಪುಗೊಳ್ಳುತ್ತಿವೆ. ಎಂದರೆ, ಮಾಧ್ಯಮಗಳ ಮೂಲಕ ಹೊಸ ಹೊಸ ಸುದ್ದಿ, ಮಾಹಿತಿ, ವಿಚಾರಗಳು ಕ್ಷಣಕ್ಷಣಕ್ಕೂ ಹೊಮ್ಮುತ್ತ, ಪೇರಿಕೊಳ್ಳುತ್ತ ಹೋಗುತ್ತಿದೆ. ಇದು ಒಂದು ರೀತಿಯಲ್ಲಿ ಈ ಆಧುನಿಕ ಕಾಲದಲ್ಲಿ ಜನರಿಗೆ ದೊರೆತಿರುವ ಶಕ್ತಿಯಾದರೆ ಮತ್ತೊಂದು ರೀತಿಯಲ್ಲಿ ಅದು ದೌರ್ಬಲ್ಯವೂ ಹೌದು. ನಿಜ, ಶೈಕ್ಷಣಿಕ ದೃಷ್ಟಿಯಿಂದ ನೋಡಿದರೆ, ಇವು ಕಲಿಕೆಗೆ ಹೊಸ ಆಕರ ವಾಗಬಹುದು. ಇವಕ್ಕೆ ಅಪರಿಮಿತವಾದ ಸಾಧ್ಯತೆ ಇರುವ ಹಾಗೇನೋ ಕಾಣುತ್ತದೆ; ಆದರೆ ಇದನ್ನು ಸಾಮಾಜಿಕ ಮತ್ತು ಆರ್ಥಿಕ ಇತಿಮಿತಿಗಳ ಒಳಗೆ ನೋಡಬೇಕು. **ಶಿಕ್ಷಣದಲ್ಲಿ ಅತಿಯಾದ ಅಥವಾ ನಿರುಪಯುಕ್ತವಾದ ಮಾಹಿತಿ ಕೂಡ ಏರುಪೇರನ್ನುಂಟುಮಾಡಬಹುದು. ಯಾವುದೇ ಮಾಹಿತಿಯ ಬೆಲೆಯು ಅದರ ಉಪಯುಕ್ತತೆ, ನಿರ್ದಿಷ್ಟತೆ ಹಾಗೂ ಅದನ್ನು ಎಷ್ಟರ ಮಟ್ಟಿಗೆ ಅರಗಿಸಿಕೊಳ್ಳಬಹುದು ಎನ್ನುವುದರ ಮೇಲೆ ನಿಂತಿದೆ.** ಆದ್ದರಿಂದಲೇ, ವಿಚಾರಗಳನ್ನು ವಿಂಗಡಿಸಿ, ಆಯ್ದು, ಬೇಕಾದಂತೆ ಕಲಿಯಬಲ್ಲ ಸಾಮರ್ಥ್ಯಕ್ಕೇ ಈಚೆಗೆ ಶಿಕ್ಷಣದಲ್ಲಿ ಹೆಚ್ಚು ಒತ್ತು ಕೊಡಲಾಗು ತ್ತದೆಯೇ ಹೊರತು, ಮಾಹಿತಿಗಳ ಪರಿಣಾಮಕ್ಕಲ್ಲ. **ಮಾಹಿತಿಗಳ ಗುಣಮಟ್ಟ ಮುಖ್ಯವೆ ಹೊರತು ಅವುಗಳ ಪ್ರಮಾಣವಲ್ಲ ಎಂಬ ಪ್ರಜ್ಞೆ ನಮಗೆ ಮೂಡಬೇಕು.**

### ೪. ಸ್ಪರ್ಧೆಯ ಅಗತ್ಯಕ್ಕೂ ಸಮಾನಾವಕಾಶದ ಕಾಳಜಿಗೂ ನಡುವಿನ ಘರ್ಷಣೆ

ಇದು ಆರ್ಥಿಕ-ಸಾಮಾಜಿಕ ನೀತಿಗಳನ್ನು ರೂಪಿಸುವವರ ಸಮಸ್ಯೆ. 'ಸಮಾನ ಅವಕಾಶ' ಎನ್ನುವುದು ಹಲವಾರು ಬಗೆಯ ವ್ಯಾಖ್ಯೆಗಳಿಗೆ, ಹಾಗೆಯೇ ಅಪಾರ್ಥಗಳಿಗೆ, ಸಾಧ್ಯತೆಯನ್ನು ಕಲ್ಪಿಸಿದೆ. ಹಾಗೆಯೇ, ಪೈಪೋಟಿಯ ಉದ್ದೇಶವು ಉತ್ತಮ ಗುಣಮಟ್ಟವನ್ನು ತರುವುದು ಎನ್ನುವುದಾದರೆ, ಸ್ಪರ್ಧೆಯು ನ್ಯಾಯಯುತವಾಗಿರಬೇಕು; ಅದರ ನಿಯಮಗಳು ಜಾಣ್ಮೆಯಿಂದ ರೂಪಿತವಾಗಿರಬೇಕು. ಹೀಗೆಂದರೂ, ಶಿಕ್ಷಣ ಕ್ಷೇತ್ರದಲ್ಲಿ ಇವೆಲ್ಲ ಅತಿ ನಾಜೂಕಿನ ವಿಚಾರಗಳಾಗುತ್ತವೆ. **ಒಟ್ಟಿನಲ್ಲಿ, ಶಿಕ್ಷಣದ ಗುಣಮಟ್ಟ ಒಂದೆಡೆ, ಎಲ್ಲರಿಗೂ ಉತ್ತಮ ಶಿಕ್ಷಣ ದೊರಕಬೇಕಾದುದರ ಅಗತ್ಯ ಇನ್ನೊಂದೆಡೆ – ಇವೆರಡು ವಿಭಿನ್ನ ಆದರ್ಶಗಳಲ್ಲಿ ಸಾಮರಸ್ಯ ಇರಬೇಕಾದದ್ದು ಮುಖ್ಯ.**

### ೫. ಅಧ್ಯಾತ್ಮಕ್ಕೂ ಲೌಕಿಕಕ್ಕೂ ನಡುವಣ ಘರ್ಷಣೆ

ಒಂದು ಆದರ್ಶಕ್ಕಾಗಿ ಮತ್ತು ಮೌಲ್ಯಗಳಿಗಾಗಿ ಹಾತೊರೆಯುವುದನ್ನೇ ನಾವು 'ನೈತಿಕ ಬಾಳ್ವೆ' ಎನ್ನುತ್ತೇವೆ. ಪ್ರತಿಯೊಬ್ಬರೂ ತಮ್ಮ ತಮ್ಮ ಶ್ರದ್ಧೆಗೆ ಅನುಗುಣವಾಗಿ ನಡೆದುಕೊಳ್ಳುತ್ತಲೇ, ತಮ್ಮ ಬುದ್ಧಿ-ಚೇತನಗಳನ್ನು ವಿಶ್ವಾತ್ಮಭಾವಕ್ಕೆ ಏರಿಸಿಕೊಳ್ಳಲು ನೆರವಾಗುವುದು ಶಿಕ್ಷಣದ ಉನ್ನತ ಧ್ಯೇಯ. ಅದು ಸಾಧ್ಯವಾಗುವುದು ಅಧ್ಯಾತ್ಮ ಜ್ಞಾನದ ಬೆಳಕಿನಲ್ಲಿ ಲೌಕಿಕ ಶಿಕ್ಷಣ ನೀಡುವುದರಿಂದ ಮಾತ್ರ. ಏಕೆಂದರೆ, ಶಿಕ್ಷಣದ ಒಂದು ಗುರಿಯಾದ ನೈತಿಕತೆಗೆ ಅಧ್ಯಾತ್ಮವೇ ಆಧಾರಭೂತವಾದದ್ದು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

### ಮೌಲ್ಯಗಳು ಯಾವುವು, ಒಂದು ಮೌಲ್ಯವ್ಯವಸ್ಥೆ ಹೇಗಿರಬೇಕು?

ಮೌಲ್ಯಗಳನ್ನು ಒಂದು ಪ್ರತ್ಯೇಕ ವಿಷಯವಾಗಿಯೇ ಬೋಧಿಸಬಹುದು, ಇಲ್ಲವೆ ಶಿಕ್ಷಣದ ಪ್ರಕ್ರಿಯೆಯಲ್ಲಿಯೇ ಅವು ಅಂತರ್ಗತವಾಗಿರಬಹುದು. ಹೇಗಿದ್ದರೂ, ಮೌಲ್ಯಗಳಿಗೆ ಶಿಕ್ಷಣದ ಪ್ರತಿಯೊಂದು ಹಂತದಲ್ಲಿಯೂ ಅತಿ ಮುಖ್ಯ ಸ್ಥಾನವಿದೆ. ಮೌಲ್ಯಗಳು ಅಲ್ಲಲ್ಲಿಯ ಸಂಸ್ಕೃತಿಯನ್ನು ಕೆಲಮಟ್ಟಿಗೆ ಆಧರಿಸಿವೆ ಎನ್ನುವುದೇನೋ ನಿಜ; ಆದರೆ ಇದನ್ನು ಮೀರಿದ ಹಲವಾರು ಸಾರ್ವತ್ರಿಕ ಮೌಲ್ಯಗಳೂ ಅನೇಕವಿವೆ. ಮೊದಲಿಗೆ ಮೌಲ್ಯವೆಂದರೇನು, ಅವುಗಳ ವಿಧಗಳು, ಮಾನವನ ಜೀವನದ ಗುರಿಗಳು-ಇವೆಲ್ಲ ಅಧ್ಯಯನಯೋಗ್ಯ ವಿಚಾರಗಳು; ಅದರಲ್ಲೂ ಅವುಗಳನ್ನು ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ನೋಡಬೇಕಾದ್ದು ಅತ್ಯಂತ ಆವಶ್ಯಕ. **ಮನೆ, ಶಾಲೆ, ಸಮಾಜ** – ಇವು ಮೂರೂ ಮಗುವಿನ ನೈತಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ವಾಸ್ತವವನ್ನು ಗಮನದಲ್ಲಿಟ್ಟುಕೊಂಡು ನೈತಿಕ ನಿಯಮಗಳ ಬಗ್ಗೆ ತಿಳಿಯಹೇಳುವುದು ನಿಜಕ್ಕೂ ಶಿಕ್ಷಣ ತಜ್ಞರ ಪಾಲಿಗೊಂದು ಸವಾಲು. [**ಎನ್.ಸಿ.ಇ.ಆರ್.ಟಿ.** (National Council of Educational Research and Training) ರೂಪಿಸಿದ ಮೌಲ್ಯಗಳ ವರ್ಗೀಕರಣವನ್ನು ಮತ್ತು ಆ *ವರ್ಗೀಕರಣದಲ್ಲಿರುವ ಎಲ್ಲ ೮೪ ಮೌಲ್ಯಗಳ ಪಟ್ಟಿಯನ್ನು ಪುಟ ೬೪ರಲ್ಲಿ ಕಾಣಬಹುದು. ಅವುಗಳನ್ನು ಮಕ್ಕಳಿಗೆ ಪರಿಚಯಿಸುವುದು ಪೋಷಕರ ಮತ್ತು ಶಿಕ್ಷಕರ ಆದ್ಯ ಕರ್ತವ್ಯ.*-ಸಂ.]

> **ಮೌಲ್ಯಶಿಕ್ಷಣವೆಂದರೇನು?**
>
> **ಮಾನವ** ಬದುಕಿನ ಉದಾತ್ತ ಧ್ಯೇಯಗಳನ್ನು, ಹೆಗ್ಗುರಿಗಳನ್ನು, ಪವಿತ್ರ ಚಿಂತನೆಗಳನ್ನು ಹಾಗೂ ಅಪೇಕ್ಷಣೀಯ ಗುಣ ನಡತೆಗಳನ್ನು ಶಿಕ್ಷಣದ ಮೂಲಕ ಕಲಿಯುವಂತೆ ಮಾಡುವ ವ್ಯವಸ್ಥೆಯೇ ಮೌಲ್ಯ ಶಿಕ್ಷಣ. *–ಅನಾಮಿಕ*
>
> **ವ್ಯ**ಕ್ತಿಯ ಹೃದಯವನ್ನು ಶ್ರೀಮಂತಗೊಳಿಸಲು ತರಬೇತಿ ಮತ್ತು ವಾಸ್ತವದೃಷ್ಟಿಯೊಡನೆ, ವ್ಯಕ್ತಿಗೆ ಆಧ್ಯಾತ್ಮಿಕ ತರಬೇತಿಯನ್ನು ಕೊಡುವುದೇ ಮೌಲ್ಯ ಶಿಕ್ಷಣ *–ಮಹಾತ್ಮ ಗಾಂಧೀ*
>
> **ಮೌ**ಲ್ಯಶಿಕ್ಷಣವೆಂದರೆ ಒಬ್ಬರಿಗೊಬ್ಬರು ಅರ್ಥ ಮಾಡಿಕೊಳ್ಳುವ ಮಾನವೀಯ ಗುಣಗ್ರಾಹಕತೆಯನ್ನು ಬೆಳೆಸುವುದು.
>
> *–ರವೀಂದ್ರನಾಥ ಠಾಕೂರ್*

**ಈ ನಿಟ್ಟಿನಲ್ಲಿ,** UNESCO **"ಆಧ್ಯಾತ್ಮಿಕ ಮೌಲ್ಯ"ಗಳಿಗೆ ಎಷ್ಟೊಂದು ಪ್ರಾಶಸ್ತ್ಯವನ್ನೂ ಅಗ್ರಸ್ಥಾನವನ್ನೂ ಕೊಟ್ಟಿದೆ ಎನ್ನುವುದು ನಿಜಕ್ಕೂ ಗಮನಾರ್ಹ ಅಂಶ.** UNESCO ದ 'Learn to be' ('ಇರುವಿಕೆಯ ಕಲಿಕೆ') ಎನ್ನುವ ದಾಖಲೆಯಲ್ಲಿರುವ ಈ ಕೆಳಗಿನ ಮಾತುಗಳು ಶಿಕ್ಷಣದ ಒಟ್ಟಾರೆ ಧ್ಯೇಯೋದ್ದೇಶಗಳನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತವೆ.

"ಪ್ರತಿಯೊಬ್ಬ ವ್ಯಕ್ತಿಯೂ **ಮಾನಸಿಕ ದೈಹಿಕ ಬೌದ್ಧಿಕ ಬೆಳವಣಿಗೆ ಹಾಗೂ ಸಂವೇದನಾಶೀಲತೆ, ಕಲಾಭಿರುಚಿ, ಸ್ವಾವಲಂಬನೆ ಮತ್ತು ಆಧ್ಯಾತ್ಮಿಕ ಪ್ರಜ್ಞೆಯ ವಿಕಸನ** – ಈ ಎಲ್ಲ ದಿಸೆಗಳಲ್ಲಿ ಬೆಳೆಯಲು ಶಿಕ್ಷಣವು ನೆರವಾಗಬೇಕು. ವ್ಯಕ್ತಿಗಳು ಸ್ವಂತ **ಆಲೋಚನಾ ಶಕ್ತಿ**ಯನ್ನು ಬೆಳೆಸಿಕೊಳ್ಳುವಂತಾಗಲು, ಜೀವನದ ವಿವಿಧ ಸಂದರ್ಭಗಳಲ್ಲಿ ತಾವು ಹೇಗೆ ನಡೆದುಕೊಳ್ಳಬೇಕೆಂಬುದನ್ನು ತಾವೇ ತೀರ್ಮಾನಿಸುವಂತಾಗಲು, ಒಟ್ಟಿನಲ್ಲಿ **ಆತ್ಮವಿಶ್ವಾಸ ಬೆಳೆಸಿಕೊಳ್ಳಲು,** ಮತ್ತು ತಾಂತ್ರಿಕ ಬದಲಾವಣೆಗಳಿಂದಾಗಿ ಮಾನವೀಯತೆ ಹೇಗೆ ನಶಿಸುತ್ತಿದೆ ಎಂಬ **ವಿವೇಕಪ್ರಜ್ಞೆ** ಅವರಿಗೆ ಬರುವಂತಾಗಲು ಇಂಥ ಶಿಕ್ಷಣ ಅತ್ಯಂತ ಅವಶ್ಯವಾಗಿದೆ."

ಈ ಬಗೆಯ ಶಿಕ್ಷಣವನ್ನು ಕೊಡುವ ದಿಸೆಯಲ್ಲಿ ಶಿಕ್ಷಣತಜ್ಞರು, ಆಡಳಿತಗಾರರು, ಶಿಕ್ಷಕರು, ಪೋಷಕರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಕ್ರೋಡೀಕರಿಸಿ ಪ್ರಯತ್ನಶೀಲರಾಗುವುದು ಜಾಗತೀಕರಣದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಅತ್ಯಂತ ಆವಶ್ಯಕವಾಗಿದೆ. ▪

### ಶಿಕ್ಷಣ ಕಲೆ

**ಶಾಲೆಯೊಂದು ಕಲಾವಿದನ ಸ್ಟುಡಿಯೋ ಇದ್ದಂತೆ. ಅದರಲ್ಲಿರುವ ಸಾಮಗ್ರಿಗಳೇ ವಿದ್ಯಾರ್ಥಿಗಳು. ತನ್ನ ಉದ್ದೇಶಗಳಿಗೆ ತಕ್ಕಂತೆ ವಿದ್ಯಾರ್ಥಿಗಳೆಂಬ ಜೀವಂತ ಸಾಮಗ್ರಿಗಳನ್ನು ಕೆತ್ತಿ ರೂಪಿಸುವ ಕಲಾವಿದನೇ ಉಪಾಧ್ಯಾಯ. ಇದಕ್ಕೆ ನೆರವಾಗುವುದೇ ಪಠ್ಯಕ್ರಮ.**

*– ಕನ್ನಿಂಗ್ ಹ್ಯಾಮ್*